‘ನನಗೆ ಆ ರೋಗದ ಬಗ್ಗೆ ಡೀಟೇಲ್ ಆಗಿ ಗೊತ್ತಾದ್ದರಿಂದ’ ಅಂದಳಾಕೆ.

ನನಗೆ ಭಯವಾಯಿತು.

‘ಏನು ಹಾಗೆ ನೋಡ್ತಿದೀರಿ? ನಶೆ ತಲೆಗೇರಿ ಸಂಬಂಧವಿಲ್ಲದ ಮಾತುಗಳನ್ನಾಡುತ್ತಿದ್ದೀನಿ ಅಂತಲಾ? ಸಂಬಂಧ ಇರೋ ಮಾತೇ ಇದು’

‘ಏನು ಆರ್ಥ್ರೈಟಿಸ್?’

‘ಹೌದು. ಮುಂದೆ ಕೇಳಿ. ನನಗೆ ಏಳು ವರ್ಷ ವಯಸ್ಸಾಗಿರುವಾಗ ಮೊದಲ ಸಲ ಆರ್ಥ್ರೈಟಿಸ್ ಬಂತಂತೆ. ಆ ಮಾತು ನಮ್ಮ ತಂದೆ ಹೇಳುತ್ತಿದ್ದರೆ ಗೊತ್ತೇ ಆಗಲಿಲ್ಲ. ನನಗೆ ಎಳ್ಳಷ್ಟೂ ನೆನಪಿಲ್ಲ. ಅವರೇ ಏನೋ ಔಷಧಿ ಕೊಟ್ಟು ಆ ರೋಗ ಗುಣಪಡಿಸಿದರು. ಆಗಿನಿಂದ ಅದು ಮತ್ತೆ ಕಾಣಿಸಿಕೊಂಡಿರಲಿಲ್ಲವಾದರೂ ನನ್ನ ಮಗ ಹೊಟ್ಟೇಲಿದ್ದಾಗ ಮತ್ತೆ ಕೀಲುನೋವು ಪ್ರಾರಂಭವಾಯಿತು. ಡೆಲಿವರಿ ಆದ ಮೇಲೆ ಆಶ್ಚರ್ಯಕರ ರೀತಿಯಲ್ಲಿ ಅವಷ್ಟಕ್ಕವೇ ಮಾಯವಾದವು. ಆದರೆ ಮೂರು ವರ್ಷದ ಹಿಂದೆ ಬಂದಾಗ ಹೋಗಲಿಲ್ಲ. ನರಕ ತೋರಿಸಿದವು. ಕಾಲು ಕದಲಿಸಬೇಕೆಂದರೆ ನಾಲ್ಕು ಹೆಜ್ಜೆ ನಡೆಯಬೇಕೆಂದರೆ ಮೆದುಳು ಸಿಡಿದುಹೋಗೋದು. ಅಷ್ಟು ನೋವು.

ಆದರೆ ಎಷ್ಟು ನೋವಾದರೂ ಸಾಧಾರಣವಾಗಿ ಆರ್ಥ್ರೈಟಿಸ್‌ಗೆ ಅತಿಯಾಗಿ ಮೆಡಿಸಿನ್ ಬಳಸಬಾರದು. ಆದರೆ ನಮ್ಮ ಫ್ರೆಂಡ್ ಒಬ್ಬಾತ ರುಮಟಾಲಜಿಯಲ್ಲಿ ಡಿಪ್ಲೊಮಾ ಮಾಡಿ ಬಂದವನೆಂಬ ಅರ್ಹತೆಯಿಂದ ನನ್ನ ನೋವು ನೋಡಲಾಗದೆ ನನಗ್ಯಾವುದೋ ಮೆಡಿಸಿನ್ ಪ್ರಿಸ್ಕ್ರೈಬ್ ಮಾಡಿದ. ಅರ್ಧಜ್ಞಾನದಿಂದ ಅಜ್ಞಾನದಿಂದ ಆತ ಮಾಡಿದ ಕೆಲಸದ ಹೊಡೆತಕ್ಕೆ ನನ್ನ ದೃಷ್ಟಿ ಹೋಯಿತು.’

‘ಆ’ ಅಂದೆ.

‘ಏನಂದಿರಿ?’ ಅಂದೆ ಬಾಯಿ ತೆಗೆಯುತ್ತ.

ಆಕೆ ನಕ್ಕಳು.

‘ಪಾಪ ಆತ ಸದುದ್ದೇಶದಿಂದಲೇ ಕೊಟ್ಟ. ಆದರೆ ಯಾವಾಗಲೂ ಡಾಕ್ಟರಿಂದಾಗಿ ಪೇಶೆಂಟ್ಸಿಗೇ ನಷ್ಟ ಆದರೆ ಹೇಗೆ? ಆಗಾಗ ಡಾಕ್ಟರಿಗೂ ನಷ್ಟವಾಗಬೇಡವೆ? ನಾನು ಹಾಗೆ ಹಾನಿಗೊಳಗಾದೆ. ಆತ ಕೊಟ್ಟ ಔಷಧಿ ಚೆನ್ನಾಗಿ ಕೆಲಸ ಮಾಡಿದವು. ಇನ್ನೂ ಹೇಳಬೇಕೆಂದರೆ ಹೆಚ್ಚೇ ಕೆಲಸ ಮಾಡಿದವು. ನೋವನ್ನು ಹತ್ತಿಕ್ಕಿಬಿಟ್ಟವು. ರೋಗ ಹೋಗಿರಲಿಲ್ಲ. ದೇಹದೊಳಗೇ ವಿಷದಂತೆ ತಿರುಗುತ್ತ ಆರು ತಿಂಗಳ ಹಿಂದೆ ಕಣ್ಣಿಗೆ ಹೊಡೆತ ಕೊಟ್ಟವು.

ತುಂಬಾ ಅನ್ಯೂಜುವಲ್ ಅದು. ಆದರೆ ಇವತ್ತು ನಾಳೆ ಅನ್‌ಯೂಜುವಲ್ ಥಿಂಗ್ಸೇ ತಾನೇ ನಡೀತಿರೋದು. ಆ ಹೊತ್ತಿಗೆ ನನ್ನ ಗಂಡ ಎರಡನೆ ಸಲ ಬಂದು ಹೋಗಿದ್ದ. ಎಲ್ಲ ಸರಿಯಾಗೇ ಇದೆಯಲ್ಲ ಅಂದುಕೊಳ್ಳೋ ಹೊತ್ತಿಗೆ ಸಡನ್ ಆಗಿ ಒನ್ ಫೈನ್ ಮಾರ್ನಿಂಗ್ ನನ್ನ ಕಣ್ಣುಗಳು ತೆರೆದುಕೊಳ್ಳಲಿಲ್ಲ. ದೇ ವರ್ ಡ್ರೈ. ಉರಿ. ನೋವು. ಬಲವಂತದಿಂದ ತೆಗೆದರೆ ಕೆಂಪಗೆ ಬೆಂಕಿಯುಂಡೆಗಳಂತೆ ತಯಾರಾಗಿದ್ದವು. ಇಮೇಜ್ ಕಾಣಿಸುತ್ತಿಲ್ಲ. ಬ್ಲರ್ ಆಗ್ತಾ ಇದೆ. ಮೊದಮೊದಲಿಗೆ ಅರ್ಥವಾಗ್ಲಿಲ್ಲ. ಏನಾಗಿದೆ ಅಂತ ಗೊತ್ತಾದಾಗ ಎದೆಬಡಿತ ನಿಂತಂತಾಯ್ತು. ಸೀವಿಯರ್ ಅಟ್ಯಾಕ್ ಅದು. ಎಲ್‌ವಿಪ್ರಸಾದ್ ಇದ್ದಿರದಿದ್ದರೆ ಇಷ್ಟೊತ್ತಿಗೆ ನಾನು ಕುರುಡಿಯಂತೆ ತಿರುಗಾಡ್ತಾ ಇರ್ತಿದ್ದೆ. ಆದರೆ ಲಾಸ್ ಅಂತೂ ತಪ್ಪಲಿಲ್ಲ. ನನ್ನ ಟಿಯರ್ ಗ್ಲ್ಯಾಂಡ್ಸ್ ಒಣಗಿಹೋದವು. ನನ್ನ ಕಣ್ಣುಗಳು ಒಣಕಣ್ಣುಗಳಾದವು...’